ತೊಡಗಿಸಿಕೊಳ್ಳುವಲ್ಲಿ ಇಷ್ಟು ಯಶಸ್ವಿಯಾಗಲು ಕಾರಣವೇನೆಂದರೆ ಇಲ್ಲಿನ ಸೇಲ್, ರೀಸೇಲ್ ಪೋಸ್ಟ್‌ಗಳು.

ನಾನು ಮೊದಲೇ ಹೇಳಿದಂತೆ ಇಲ್ಲಿರುವವರಲ್ಲಿ ಹೆಚ್ಚಿನವರು ಎರಡು ಮೂರು ವರ್ಷಕ್ಕೊಮ್ಮೆ ಎಲ್ಲಿಂದೆಲ್ಲಿಗೋ ಹೋಗಿ ನೆಲೆಸುವವರು. ಶ್ರೀಮಂತರೂ ಕೂಡ. ಹಾಗಾಗಿ ತಮ್ಮ ಮನೆಯನ್ನು ಸುಸಜ್ಜಿತವಾಗಿ ತಮಗೆ ಬೇಕಾದ ಹಾಗೆ ಅಲಂಕರಿಸಿಕೊಳ್ಳುವವರು. ಮಕ್ಕಳಿಗೆ ಮನೆಯಲ್ಲೇ ಪಾರ್ಕಿನ ಆಟದ ವ್ಯವಸ್ಥೆ ಮಾಡಿಕೊಳ್ಳುವವರು. ಇಂತಹವರು ಮನೆ ಖಾಲಿ ಮಾಡಿ ಹೋಗುವಾಗ ಇಲ್ಲಿನ ನಿಯಮದ ಪ್ರಕಾರ ಎಲ್ಲಾ ಮೊದಲಿದ್ದಂತೆಯೇ ಬಿಟ್ಟು ಉಳಿದ ಎಕ್ಸ್‌ಟ್ರಾ ಸಾಮಾನು ಖಾಲಿ ಮಾಡಿಯೇ ಹೋಗಬೇಕು. ಕೊಡುವಾಗ ಹತ್ತು ಕೊಟ್ಟರೆ ಕೈ ಬಿಡುವಾಗ ಒಂದಾದರೂ ಪೈಸೆ ಸಿಗಲಿ ಎಂಬುದು ಮನುಷ್ಯ ಸಹಜ ಗುಣ. ಕೆಲವೊಮ್ಮೆ ಕೆಲವೊಂದು ವಸ್ತುಗಳನ್ನು 'ಪಾಪ' ಎಂದು ಫ್ರೀಯಾಗಿ ಕೊಟ್ಟು ಹೋಗುವವರಿದ್ದರೂ ಅದು ವಿರಳಾತಿ ವಿರಳ. ವಾರದಲ್ಲಿ ಒಂದೆರಡು ದಿನ ಕೆಲವೊಮ್ಮೆ ವಾರವಿಡೀ ಇಂತಹದೇ ಕೊಡು ಕೊಳ್ಳುವ ಜಾಹೀರಾತು ಸಚಿತ್ರವಾಗಿ ಬರುತ್ತಿರುತ್ತದೆ ಇಲ್ಲಿ.

ಎಲ್ಲಾ ಮನೆಗಳೂ ಒಂದೇ ತೆರನಾಗಿದ್ದುದರಿಂದ ಅವರ, ಇವರ ಮನೆಯ ಕಿಟಕಿಯ ಅಳತೆ, ಬೆಡ್ ರೂಂ ಅಳತೆ ಎಲ್ಲಾ ಸೇಮ್ ಟು ಸೇಮ್. ಹಾಗಾಗಿ ಅವರ ಮನೆಯ ವಾರ್ಡ್ ರೋಬ್ ಇವರ ಮನೆಗೂ ಫಿಟ್ ಆಗುತ್ತೆ. ಅವರ ಮನೆಯ ಕರ್ಟನ್ ಇಲ್ಲಿಗೂ ಸಲ್ಲುತ್ತೆ. ಗಾರ್ಡನ್ ಸಾಮಾನು ಇವರಿಗೂ ಬೇಕು. ಹೀಗಿರುವಾಗ ಒಬ್ಬರಿಗೆ ಬೇಡವಾಗಿದ್ದು ಇನ್ನುಳಿದ ಇನ್ನೂರ ತೊಂಬತ್ತು ಮನೆಯಲ್ಲಿ ಒಬ್ಬರಿಗಾದರೂ ಬೇಕಾಗುತ್ತದೆ ತಾನೇ? ಹಾಗಾಗಿ ಸದಾ ಇಲ್ಲಿ ಇಂತಹ ಸಂದೇಶ ಬಂದ ತಕ್ಷಣ ಕ್ಯೂ ಇರುತ್ತದೆ. ಆಫೀಸಿನಲ್ಲಿ ಬ್ಯುಸಿಯಾಗಿರುವವರು ಸಂಜೆ ಮನೆಗೆ ಬಂದ ಮೇಲೆ ನಮ್ಮ ಗುಂಪಿನಲ್ಲಿ ಹೀಗೆ ಬಂದು ಹಾಗೆ ಹೋದ ಸಾಮಾನುಗಳ ಪಟ್ಟಿ ನೋಡಿ 'ಅಯ್ಯೋ, ಇದು ನಮಗೆ ಬೇಕಾಗಿತ್ತಲ್ಲ' ಎಂದು ಕೈ ಕೈ ಹೊಸಕಿಕೊಳ್ಳುವವರೆಷ್ಟೋ ಪಾಪ. ಟೂ ಬ್ಯಾಡ್, ಆದರಿಲ್ಲಿ ಫಸ್ಟ್ ಕಂ, ಫಸ್ಟ್ ಸರ್ವ್ ಪಾಲಿಸಿ ಬಹಳ ಕಟ್ಟುನಿಟ್ಟಾಗಿದೆ.

ಹೀಗಿರುವಾಗ ನನ್ನನ್ನೂ, ನಮ್ಮನೆಯವರನ್ನೂ ಕಾಡಿದ್ದು 'ಸನ್‌ಶೈನ್' ಎಂಬ ಒಬ್ಬ ಹೆಂಗಸಿನ ಚುರುಕುತನ ಅಥವಾ ಆಸೆಬುರುಕುತನ. ಯಾರು ಯಾವ ಸಾಮಾನು 'ಫ್ರೀ' ಎಂದು ಹಾಕಿದರೂ ಅವಳು ತಕ್ಷಣವೇ 'ನಂಗೇ ಇರಲಿ' ಎಂದು ಮೆಸೇಜು ಕುಟ್ಟುತ್ತಿದ್ದಳು. 'ಅಬ್ಬಾ, ಇವಳೇನು ನಿದ್ರೆ, ಊಟವನ್ನೂ ಬಿಟ್ಟು ಈ ಗ್ರೂಪಿನ ಮೆಸೇಜ್ ನೋಡುತ್ತಾ ಇರುತ್ತಾಳಾ' ಅಂತ ನಮಗೆ ಅನುಮಾನ ಶುರುವಾಯ್ತು. ಒಳ್ಳೆಯ ವಸ್ತುಗಳು ಕಡಿಮೆ ಬೆಲೆಗೆ ಸಿಕ್ಕಿದರೂ ಇವಳು ಎಲ್ಲರಿಗಿಂತ ಮೊದಲು ಹಾಜರ್. ಅದು ಎಳೆಯ ಮಕ್ಕಳಿಂದ, ಮುದುಕರವರೆಗೆ, ಕಂಪ್ಯೂಟರ್, ಟೀವಿಯಿಂದ ಅಡುಗೆಯ ಸೌಟಿನವರೆಗೆ ಯಾವುದನ್ನೂ ಅವಳು ಬಿಡುತ್ತಲೇ ಇಲ್ಲ. ಒಮ್ಮೆ ಇವಳನ್ನು ನೋಡಬೇಕು ಅಂತ ನನಗನ್ನಿಸತೊಡಗಿತು. ಒಟ್ಟಿನಲ್ಲಿ ಸನ್‌ಶೈನ್ ಕಣ್ಣಿನಿಂದ ತಪ್ಪಿಸಿ ಯಾವ ವಸ್ತುಗಳೂ ಬೇರೆಯವರಿಗೆ ಸಿಗುವುದು ದುರ್ಲಭ ಎಂಬ ಮಟ್ಟ ತಲುಪಿದಾಗ ಒಳಗೊಳಗೇ ಗುಸಪಿಸ ಎದ್ದಿರಬೇಕು. ನಮ್ಮ ಅಡ್ಮಿನ್ ಒಂದು ಲೈಟಾಗಿ ಡೋಸ್ ಕೊಟ್ಟಳು. 'ನೋಡಿ, ಇಲ್ಲಿ ಹಾಕುವ ಸಾಮಾನುಗಳು ನಮಗಂತೂ ಬೇಡ, ಆದರೆ ನಮ್ಮ ನೆರೆಹೊರೆಯವರ ಉಪಯೋಗಕ್ಕೆ ಬಂದರೆ ಅವರಿಗೇ ಕೊಡೋಣ ಅನ್ನೋ ಒಳ್ಳೆ ಉದ್ದೇಶಕ್ಕೆ ಇರೋದು. ಇಲ್ಲದಿದ್ದರೆ ಹೊರಗೆ ಇಂತಹ ವಸ್ತುಗಳನ್ನು ಮಾರಾಟ ಮಾಡಲು ಬೇಕಾದಷ್ಟು